**ನಿರ್ವಹಣೆ: ಸಂದೀಪ ನಾಯಕ**

ನಮ್ಮ ನಡುವಿನ ಬರಹಗಾರರು 2019ರಲ್ಲಿ ತಾವು ಓದಿದ ಮುಖ್ಯ ಪುಸ್ತಕಗಳ ಬಗ್ಗೆ ಕಿರುಟಿಪ್ಪಣಿಗಳನ್ನು ಇಲ್ಲಿ ಬರೆದಿದ್ದಾರೆ. ಅವುಗಳ ಮಹತ್ವದ ಕುರಿತು ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರೆ. ಇದು 'ಟಾಪ್–10' ಪಟ್ಟಿಯಲ್ಲ. ಕಳೆದ ವರ್ಷ ಪ್ರಕಟವಾದ ಕೆಲವು ಮುಖ್ಯ ಪುಸ್ತಕಗಳನ್ನು ಓದುಗರ ಅವಗಾಹನೆಗೆ ತರುವುದು ಈ ಕಿರುಬರಹಗಳ ಉದ್ದೇಶ.

# ಬಹು ಆಯಾಮಗಳ ಕೃತಿ

ಸದ್ಯ ನವದೆಹಲಿಯ ಜೆ.ಎನ್.ಯು ಕನ್ನಡ ಪೀಠದ ಪ್ರಾಧ್ಯಾಪಕರಾಗಿರುವ ಪುರುಷೋತ್ತಮ ಬಿಳಿಮಲೆ ಕನ್ನಡ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಗಳಲ್ಲಿ ಹೆಸರಾಂತ ವಿದ್ವಾಂಸರು ಹಾಗೂ ಸಂಶೋಧಕರು; ಈ ಕ್ಷೇತ್ರಗಳಲ್ಲಿ ಗಂಭೀರ ಅಧ್ಯಯನಗಳನ್ನಾಧರಿಸಿದ ಅನೇಕ ಮೌಲಿಕ ಕೃತಿಗಳನ್ನು ಅವರು ರಚಿಸಿದ್ದಾರೆ. ಇವರ ಎಲ್ಲಾ ಅಧ್ಯಯನಗಳ ಮೂಲ ಕಾಳಜಿಗಳೆಂದರೆ ತಳ ಸಮುದಾಯಗಳ ಬದುಕು ಹಾಗೂ ಸಂಸ್ಕೃತಿ, ಮತ್ತು ಬಹುತ್ವ–ಕೇಂದ್ರಿತ ಸಮಾಜ. ಈ ನೆಲೆಯಲ್ಲಿ ಇತ್ತೀಚೆಗೆ ಪ್ರಕಟವಾಗಿರುವ ಅವರ ವಿಮರ್ಶನ ಸಂಕಲನ ಕನ್ನಡ ಕಥನಗಳು.




ಕನ್ನಡ ಕಥನಗಳು
ಲೇ: ಪುರುಷೋತ್ತಮ ಬಿಳಿಮಲೆ,
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ

ಈ ಸಂಕಲನದಲ್ಲಿರುವ ಒಂಬತ್ತು ದೀರ್ಘಲೇಖನಗಳು ಕನ್ನಡ ಕಾವ್ಯದ ಬಹು ರೂಪಗಳು, ಭಕ್ತಿ ಚಳವಳಿಗಳು ಮತ್ತು ಜನಪದ ಆಚಾರ–ವಿಚಾರಗಳು, ಕನ್ನಡ ಸಂಶೋಧನೆಯಲ್ಲಿರುವ ತೊಡಕುಗಳು, ಅರೆ ಭಾಷೆಗಳ ಸಬಲೀಕರಣ, ಇತ್ಯಾದಿ ವೈವಿಧ್ಯಪೂರ್ಣ ವಿಷಯಗಳನ್ನು ವಿಶ್ಲೇಷಿಸುತ್ತವೆ ಮತ್ತು ರೋಚಕ ತೀರ್ಮಾನಗಳನ್ನು ಮಂಡಿಸುತ್ತವೆ. ಉದಾಹರಣೆಗೆ: ಕನ್ನಡ ಕಾವ್ಯವು ಇಂದಿಗೂ ಜೀವಂತವಾಗಿರುವುದಕ್ಕೆ ಕಾರಣ ಅದು ಕಾಲಕಾಲಕ್ಕೆ ಪಡೆದ ಒನಕೆವಾಡು, ಪ್ರಾಚೀನ ಮಹಾಕಥನಗಳ ಮರು ಸೃಷ್ಟಿ, ಗಮಕ, ಹರಿಕಥೆ, ಯಕ್ಷಗಾನ, ಇತ್ಯಾದಿ ಬಹುರೂಪಗಳು; ವಚನ ಚಳವಳಿ, ಶೈವ ಚಳವಳಿ, ದಾಸ ಚಳವಳಿ, ಇತ್ಯಾದಿ ಭಕ್ತಿ ಚಳವಳಿಗಳ ಆದರ್ಶ ಜಾತಿ–ಲಿಂಗಭೇದವಿಲ್ಲದ ಸರ್ವ ಸಮಾನ ಸಮಾಜವಾದರೂ ಇವೆಲ್ಲಾ ಚಳವಳಿಗಳು ಜನಪದ ಆಚರಣೆಗಳನ್ನು ಮತ್ತು ಜನಪದ ದೈವಗಳನ್ನು ನಿರಾಕರಿಸಿದವು; ಒಂದು ದೇಶದಲ್ಲಿ ಪ್ರಚಲಿತವಿರುವ ಕಥೆಗಳು ಕಾಲ–ದೇಶಾತೀತವಾಗಿ ಇತರ ದೇಶಗಳಲ್ಲಿಯೂ ಕಂಡುಬರುತ್ತವೆ; ಇಂದು ಕನ್ನಡ ಸಂಶೋಧನೆ ದುರ್ಬಲವಾಗಿದ್ದರೆ ಅದಕ್ಕೆ ಒಂದು ಕಾರಣ ಇತಿಹಾಸ ಪ್ರಜ್ಞೆಯೇ ಇಲ್ಲದ ಅಧಿಕಾರ ಕೇಂದ್ರಗಳು; ಇತ್ಯಾದಿ. ಒಟ್ಟಿನಲ್ಲಿ, ಬಹು ಆಯಾಮಗಳುಳ್ಳ ಈ ಕೃತಿ ಕನ್ನಡ ವಿಮರ್ಶೆಗೆ ಸಂದ ಬಹು ದೊಡ್ಡ ಕೊಡುಗೆ.

● **ಸಿ.ಎನ್. ರಾಮಚಂದ್ರನ್**